| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 454/2024**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 4

ಸಾಕ್ಷಿದಾರನ ಹೆಸರು : ಶಬ್ಬೀರ್ ಅಹಮ್ಮದ್
ತಂದೆಯ ಹೆಸರು : ಪೀರು ಸಾಹೇಬ್
ಪ್ರಾಯ : 58 ವರ್ಷ
ಉದ್ಯೋಗ : ವ್ಯಾಪಾರ
ವಾಸ : ಕಾರ್ಕಳ

ದಿನಾಂಕ 10-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-</u>

ಆರೋಪಿತರ ಪರಿಚಯ ಇರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ.

ನಾನು ಕಾರ್ಕಳದ ಸಾಲ್ಮರದಲ್ಲಿರುವ ಜಾಮಿಯ ಮಸೀದಿ ಸೆಕ್ರೆಟರಿ ಆಗಿರುತ್ತೇನೆ. ಚಾಸಾ-1 ಪರಿಚಯ ಇದೆ. ಅವರು ಮಸೀದಿಗೆ ಪ್ರಾರ್ಥನೆಗೆ ಬರುತ್ತಿದ್ದರು. ದಿ: 10-01-2024 ರಂದು ಚಾಸಾ-2 ಮತ್ತು ಆತನ ಪತ್ನಿ ನಿಸ್ಬಾ ರವರನ್ನು ಮಸೀದಿಗೆ ಅವರ ನಡುವಿನ ಜಗಳದ ರಾಜಿ ಸಂದಾನಕ್ಕಾಗಿ ಕರೆಸಿರುತ್ತೇನೆ. ಅದರಂತೆ ಚಾಸಾ-2 ಮತ್ತು ಅವರ ತಂದೆ ಚಾಸಾ-1 ಹಾಗೂ ನಿಸ್ಬಾ ಹಾಗೂ ಅವರ ತಾಯಿ ಬಂದಿರುತ್ತಾರೆ. ಅವರೊಂದಿಗೆ ಮಾತುಕತೆ ನಡೆಸಿ ಒಂದು ತಿಂಗಳ ನಂತರ ಇನ್ನೊಮ್ಮೆ ಮಾತುಕತೆ ಮಾಡಲು ಸಮಯ ನೀಡಿರುತ್ತೇನೆ. ಆದಾದ ನಂತರ ನಾನು ನಮಾಜಿಗೆ ಹೋಗಿರುತ್ತೇನೆ. ಉಳಿದ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಆರೋಪಿತರು ಮಸೀದಿಯ ಒಳಗೆ ರಾಜಿ ಪಂಚಾಯಿತಿಯಲ್ಲಿ ಹಾಜರಿರಲಿಲ್ಲ. ಆರೋಪಿತರು ಹಾಗೂ ಚಾಸಾ-1 ಮತ್ತು 2 ರವರ ನಡುವೆ ಜಮಾತ್ ಕೆಳಗೆ ಗಲಾಟೆ ಆದ ಬಗ್ಗೆ ಆರೋಪಿತರು ಚಾಸಾ-1 ಮತ್ತು 2 ರವರಿಗೆ

ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯ ನಿಪಿ.4 ಮತ್ತು 5 ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ದಿಃ 11-01-2024 ರಂದು ನಾನು ಪೋಲಿಸರಿಗೆ ಸುಮಾರು ರಾತ್ರಿ 8.30 ಗಂಟೆಗೆ ಜಮಾತ್ ಕಟ್ಟಡದಿಂದ ಕೆಳಗಡೆ ಜೋರಾಗಿ ಕೂಗಾಡುವುದು ……………………………………………………………………………………… …………………………………………………………………………………….... ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುವುದಾಗಿದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ- 7 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> ಃ ಆರೋಪಿತರ ಪರ ಃ ಶ್ರೀ. ಎ.ಕೆ.ಹೆಚ್ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ